**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ನವಲಗುಂದ**

| | |
|---|---|
| ಸಿ.ಸಿ. ನಂಬರ್ | - 520/2024 |
| ಸಿ.ಡಬ್ಲೂ | - 01 |
| ಪಿ.ಡಬ್ಲೂ | - 01 |
| ಸಾಕ್ಷಿಯ ಹೆಸರು | - ಈರಣ್ಣ ತಂದೆ ಈರಣ್ಣ |
| ವಯಸ್ಸು | - 50 ವರ್ಷ |
| ಉದ್ಯೋಗ | - ವ್ಯಾಪಾರ |
| ವಾಸ ಸ್ಥಳ | - ಮಾನವಿ. |

ದಿನಾಂಕಃ 14/08/2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಪ್ರಕರಣದ ಆರೋಪಿಯ ಪರಿಚಯ ಇದೆ. ಚಾಸಾ-9, 10 ರವರ ಪರಿಚಯವಿದೆ. ಚಾಸಾ-11 ಮತ್ತು 13 ರವರು ನನ್ನ ಅಣ್ಣನ ಮಕ್ಕಳು. ಚಾಸಾ-12 ನನ್ನ ಮಗ. ಚಾಸಾ-14 ರಿಂದ 17 ರವರ ಪರಿಚಯವಿದೆ. ಮೃತ ಸಣ್ಣ ಗಂಗಣ್ಣ ನನ್ನ ಅಣ್ಣ. ಮೃತ ನಾಗಮ್ಮ ಸದರಿಯವನ ಹೆಂಡತಿ. ಮೃತ ಈರಣ್ಣ ನನ್ನ ಅಣ್ಣನ ಮಗ. ಮೃತ ಹನಮಂತು ರವರ ಪರಿಚಯವಿದೆ.

2. ಈಗ ಅಂದಾಜು 6 ವರ್ಷಗಳ ಹಿಂದೆ ಇಂಡಿಕಾ ಕಾರ್ ನಲ್ಲಿ ನಾನು, ಸಣ್ಣ ಗಂಗಣ್ಣ, ನಾಗಮ್ಮ, ಈರಣ್ಣ, ಹನಮಂತು ಮತ್ತು ಚಾಸಾ-9 ರವರು ಮಾನವಿ ಯಿಂದ ಕಾರವಾರಕ್ಕೆ ಹೋಗುತ್ತಿದ್ದಾಗ ಅಣ್ಣಿಗೇರಿಯ ಹತ್ತಿರ ನಾವು ರಸ್ತೆಯ ಎಡಭಾಗಕ್ಕೆ ಹೋಗುತ್ತಿದ್ದಾಗ ಆರೋಪಿ ಚಾಲಕ ಕ್ರೂಷರ್ ವಾಹನವನ್ನು ಅತೀ ವೇಗದಿಂದ ಎದುರಿನಿಂದ ಬಂದು ರಾ.02.00 ಗಂಟೆಗೆ ಅಪಘಾತಪಡಿಸಿರುತ್ತಾನೆ. ನಮ್ಮಗಳ ಪೈಕಿ ಸಣ್ಣ ಗಂಗಣ್ಣ ಹಾಗೂ ನಾಗಮ್ಮ ಸ್ಥಳದಲ್ಲೇ ಮೃತಪಟ್ಟಿರುತ್ತಾರೆ. ಉಳಿದವರನ್ನು ಗದಗ ಆಸ್ಪತ್ರೆಗೆ

ದಾಖಲಿಸಲಾಗಿರುತ್ತದೆ. ಅಲ್ಲಿ ಈರಣ್ಣ ಹಾಗೂ ಹನಮಂತುರವರು ಮೃತಪಟ್ಟಿರುತ್ತಾರೆ. ನನಗೆ ಮೈತುಂಬ ಮಾರಣಾಂತಿಕ ಗಾಯಗಳಾಗಿರುತ್ತವೆ. ಸದರಿ ಅಪಘಾತ ಆರೋಪಿ ಚಾಲಕನ ತಪ್ಪಿನಿಂದ ಆಗಿರುತ್ತದೆ. ನಂತರ ನಾನು ನನ್ನ ಹೇಳಿಕೆಯ ದೂರನ್ನು ಗದಗ ನ ಆಸ್ಪತ್ರೆಯಲ್ಲಿ ನೀಡಿರುತ್ತೇನೆ. ಸಾಕ್ಷಿ ನೋಡಿದ ಗುರುತಿಸಿದ ದೂರನ್ನು **ನಿಪಿ-1** ಎಂದು ಎಂದು ಗುರುತಿಸಲಾಯಿತು.

(ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಅನುಮತಿ ಕೊರಿದ್ದು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸರಕಾರಿ ಸಹಾಯಕ ಅಭಿಯೋಜಕರಿಂದ –**

ಸದರಿ ಅಪಘಾತ ದಿನಾಂಕಃ 25-11-2020 ರಂದು ಆಗಿರುತ್ತದೆ ಎಂದರೆ ಸರಿ. ಸದರಿ ಸಮಯಕ್ಕೆ ಕ್ರೂಷರ್ ಸಂಃKA-25/D-8605 ನೇದ್ದನ್ನು ಅದರ ಚಾಲಕ ಹುಬ್ಬಳ್ಳಿಯಿಂದ ಗದಗ ಕಡೆಗೆ ಅತೀ ವೇಗ ಮತ್ತು ಅಲಕ್ಷ್ಯತನದಿಂದ ಮಾನವ ಜೀವಕ್ಕೆ ಅಪಾಯಕಾರಿಯಾಗುವ ರೀತಿಯಲ್ಲಿ ಚಲಾಯಿಸಿ ನಾವು ಹೊರಟಿದ್ದ ಇಂಡಿಕಾ ಕಾರ್ ಸಂಃ KA-02/D-9532 ನೇದ್ದಕ್ಕೆ ಅಪಘಾತ ಪಡಿಸಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಬಿ ಎಸ್ ಪಿ ವಕೀಲರಿಂದಃ**

ನಿ.ಪಿ.1 ನ್ನು ಪೋಲೀಸರು ಬರೆದಿದ್ದು, ನಾನು ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತೇನೆ. ಅದರಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಹೇಳಿರುವುದಿಲ್ಲ. ಅವರು ಹೇಳಿದ ಮೇರೆಗೆ ಹೆಬ್ಬಟ್ಟಿನ ಗುರುತು ಮಾಡಿರುತ್ತೇನೆ. ನಾವು ಹೊರಟಿದ್ದ ಕಾರ ನನ್ನ ಅಣ್ಣನ ಮಗ ಈರಣ್ಣ ರವರಿಗೆ ಸಂಬಂಧಿಸಿದ್ದಾಗಿತ್ತು. ಸದರಿ ಕಾರ್ ನ್ನು ಸದರಿ ಈರಣ್ಣ ರವರು ಚಲಾಯಿಸುತ್ತಿದ್ದರು. ಸದರಿಯವರಿಗೆ ಚಾಲನಾ ಪರವಾನಗೆ ಇತ್ತು. ಸದರಿ ದಿನ ನಾವು ಕಾರ್ ನಲ್ಲಿ 6 ಜನ ಇದ್ದೇವು ಎಂದರೆ ಸರಿ. ನಾನು ಸದರಿ ಕಾರ್ ನ ಹಿಂಬದಿ ಸೀಟ್ ನಲ್ಲಿ ಕುಳಿತಿದ್ದೆ. ನನ್ನ ಸಹೋದರ ಸಣ್ಣ ಗಂಗಣ್ಣ ರವರಿಗೆ ಪಾರ್ಶ್ವವಾಯು ಆಗಿತ್ತು ಎಂದರೆ ಸರಿ. ಸದರಿಯವರಿಗೆ ಕೂರಲಾಗುವುದಿಲ್ಲ, ಮಲಗಿಸಿಕೊಂಡು ಕರೆದುಕೊಂಡು ಹೋಗಬೇಕು ಎಂದರೆ ಸರಿಯಲ್ಲ. ಸದರಿ ಕಾರ್ ನಲ್ಲಿ ಚಾಲಕನನ್ನು ಸೇರಿ 5 ಜನಕ್ಕೆ ಮಾತ್ರ ಸ್ಥಳಾವಕಾಶವಿರುತ್ತದೆ ಎಂದರೆ ಸರಿ. ಸದರಿ ದಿನ ಕಾರ್ ಚಾಲಕ ನ ಪಕ್ಕದ ಸೀಟ್ ನಲ್ಲಿ ಇಬ್ಬರು ಕುಳಿತಿದ್ದೇವು ಎಂದರೆ ಸರಿಯಲ್ಲ. ಅಪಘಾತ ಸಮಯಕ್ಕೆ ಕತ್ತಲಾಗಿತ್ತು ಎಂದರೆ ಸರಿ. ಹಿಂದೆ ಕುಳಿತ ವ್ಯಕ್ತಿಗಳಿಗೆ ಎದುರಿನಿಂದ ಬಂದ ವಾಹನಗಳು ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಅಂಶವನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸಮಯಕ್ಕೆ ನನ್ನ ಸಹೋದರನಿಗೆ ನಿದ್ರೆ ಆವರಿಸಿತ್ತು ಎಂದರೆ ಸರಿಯಲ್ಲ. ಸದರಿ ಸಮಯಕ್ಕೆ

ನಾನು ಸಹ ನಿದ್ರಾವಸ್ಥೆಯಲ್ಲಿದ್ದೆ ಎಂದರೆ ಸರಿಯಲ್ಲ. ಸದರಿ ಅಪಘಾತ ನಮ್ಮ ಕಾರ ಚಾಲಕನ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಕಾರನ ಚಾಲಕನಿಗೆ ಪರವಾನಗೆ ಇರಲಿಲ್ಲ ಹಾಗೂ ನಮ್ಮ ಕಾರ ಗೆ ವಿಮೆ ಇರದ ಕಾರಣ ಆರೋಪಿ ಚಾಲಕನ ವಾಹನದ ಮೇಲೆ ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಪೋಲೀಸರು ನನ್ನ ಮರು ಹೇಳಿಕೆ ಪಡೆದುಕೊಂಡಿರುವುದಿಲ್ಲ. ಆರೋಪಿ ಚಾಲಕನ ತಪ್ಪಿನಿಂದ ಅಪಘಾತವಾಗದಿದ್ದರೂ ಸಹ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**